www.ecourtsindia.com

# ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,
# ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಸಿ.ಸಿ ನಂ. 3984/2018

ಸಿಡಬ್ಲೂ: 07

ಪಿಡಬ್ಲೂ: 06

ಸಾಕ್ಷಿದಾರರ ಹೆಸರು : ಸೋಮಶೇಖರ ಡಿ

ತಂದೆಯ ಹೆಸರು : ತಿಪ್ಪೆಸ್ವಾಮಿ

ವಯಸ್ಸು : 42 ವರ್ಷ

ಉದ್ಯೋಗ : ಪಿ.ಐ, ಆಂತರಿಕ ಭದ್ರತಾ ವಿಭಾಗ

ವಾಸಸ್ಥಳ : ಬೆಂಗಳೂರು

ದಿನಾಂಕ: 18.12.2024 ರಂದು ಪ್ರಮಾಣ ಮಾಡಿಸಲಾಯಿತು.

## ಮುಖ್ಯ ವಿಚಾರಣೆ ಹಿ.ಸ.ಸ.ಅ ರವರಿಂದ

2017 ರಿಂದ 2019 ರವರೆಗೆ ನಾನು ವೈಟ್‌ಫೀಲ್ಡ್ ಪೋಲಿಸ ಠಾಣೆಯಲ್ಲಿ ಪಿ.ಎಸ್.ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 03.02.2017 ರಂದು ಬೆಳಿಗ್ಗೆ 11.15 ಗಂಟೆ ಸಮಯದಲ್ಲಿ ನಾನು, ಚಾಸಾ 1, 8 ರಿಂದ 10 ರವರುಗಳು ಗಸ್ತಿನಲ್ಲಿದ್ದೆವು. ನಾವುಗಳು ವೈಟಪೀಲ್ಡ ರಸ್ತೆಯಲ್ಲಿ ಗಸ್ತು ಮಾಡುತ್ತಿದ್ದೆವು. ಓ ಪಾರ್ಮ ಸಿಗ್ನಲ್ ಕಾಡುಗೋಡಿ ವಾರ್ಡನ ಬಿಬಿಎಂಪಿ ಸದಸ್ಯರಾದ ಮುನಿಸ್ವಾಮಿ ಮತ್ತು ಇತರರು ಬೆಂಗಳೂರು ನಗರಾಬಿವೃದ್ದಿ ಸಚಿವರಾದ ಚಾಸಾ 2 ಮತ್ತು ಇತರೆ ಬಿಬಿಎಂಪಿ ಸದಸ್ಯರು ಹಾಗೂ ಅಧಿಕಾರಿಗಳು ಬಸನಲ್ಲಿ ವಾರ್ಡ ವೀಕ್ಷಣೆಗೆ ಹೋಗುತ್ತಿದ್ದಾಗ ಬಸನ್ನು

This is a True Copy of the Court Records Online. Authenticated @ districts.ecourtsindia.com/cnr/KABR040069362018/truecopy/order-6.pdf

ಆರೋಪಿತರು ತಡೆದು ಗಲಾಟೆ ಮಾಡುತ್ತಿದ್ದಾರೆ ಎಂದು ಚಾಸಾ1 ರವರಿಗೆ ಮಾಹಿತಿ ಬಂತು ನಂತರ ನಾನು ಮತ್ತು ಚಾಸಾ1, 8 ರಿಂದ 10 ರವರುಗಳು ಘಟನಾ ಸ್ಥಳಕ್ಕೆ ಹೋಗಿ ಅಲ್ಲಿ ಆರೋಪಿಗಳು ತಮಗೆ ಮಾಹಿತಿ ಕೊಡದೇ ನಮ್ಮ ವಾರ್ಡ ವೀಕ್ಷಣೆಗೆ ಹೇಗೆ ಬಂದಿದ್ದಿರಿ ಎಂದು ಜೋರಾಗಿ ಕಿರುಚಾಡುತ್ತ ಬಸನ್ನು ತಡೆದಿದ್ದರು. ಕೂಡಲೇ ನಾವುಗಳು  ರಸ್ತೆಯಿಂದ ಗುಂಪನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟೆವು. ನಾನು ಅದೇ ದಿನ ಠಾಣೆಗೆ ಬಂದು ಚಾಸಾ 1 ರವರು ಮದ್ಯಾಹ್ನ 12.30 ಗಂಟೆಗೆ ದೂರನ್ನು ಕೊಟ್ಟಿರುತ್ತಾರೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಚಾಸಾ 1 ರವರು ಘಟನೆಯ ವೇಳೆ ಪೊಟೊಗಳನ್ನು ತೆಗೆದಿರುತ್ತಾರೆ. ಸಾಕ್ಷಿಯು ನಿಪಿ 2 ರಿಂದ 7 ಪೋಟೊಗಳನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಗಳು ಗೈರು ಹಾಜರಿದ್ದು ಅವರ ಗುರುತಿಸುವಿಕೆಯ ಬಗ್ಗೆ ಆರೋಪಿತರ ವಕೀಲರು ತಕರಾರು ಮಾಡಿರುವುದಿಲ್ಲ. ತನಿಖಾಧಿಕಾರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ**

ನಾನು ಗಸ್ತು ಕರ್ತವ್ಯದಲ್ಲಿದ್ದೆ ಎಂಬುವುದಕ್ಕೆ ದಾಖಲೆ ಕೊಟ್ಟಿಲ್ಲ. ವೈಟಪೀಲ್ಡ ಮುಖ್ಯ ರಸ್ತೆಯಲ್ಲಿ ನಿರ್ದಿಷ್ಟವಾಗಿ ಯಾವ ಜಾಗದಲ್ಲಿ ಗಸ್ತಿನಲ್ಲಿದ್ದೆವು ಎಂಬುವುದನ್ನು ದೂರಿನಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಚಾಸಾ 2 ರವರು

This is a True Copy of the Court Records Online. Authenticated @ districts.ecourtsindia.com/cnr/KABR040069362018/truecopy/order-6.pdf

ವಾರ್ಡ ವೀಕ್ಷಣೆಗೆ ಬರುವ ಮಾಹಿತಿ ನಮ್ಮ ಠಾಣೆಗೆ ಇರಲಿಲ್ಲ. ನಮ್ಮ ಠಾಣೆಯ ಅಧಿಕಾರ ವ್ಯಾಪ್ತಿ  ವೈಟಪೀಲ್ಡ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರುತ್ತದೆ. 1 ನೇ ಆರೋಪಿ ಕಾಡುಗೋಡಿ ವಾರ್ಡಿನ ಕಾರ್ಪೋರೇಟರ್ ಆಗಿದ್ದರು. ಆರೋಪಿತರು ತಮಗೆ ಮಾಹಿತಿ ನೀಡದೇ ಚಾಸಾ 2 ರವರು ವಾರ್ಡ ವೀಕ್ಷಣೆಗೆ ಬಂದಿರುತ್ತಾರೆ ಎಂದು ಕಿರುಚಾಡುವುದನ್ನು ನಾವುಗಳು ರೆಕಾರ್ಡ ಮಾಡಿಕೊಂಡಿಲ್ಲ. ಗಲಾಟೆಯ ಸಮಯದಲ್ಲಿ ಪೊಟೊಗಳನ್ನು ಚಾಸಾ 1 ರವರು ತೆಗೆದಿರುತ್ತಾರೆ ಮತ್ತು ಗಲಾಟೆ ಮಾಡುವವರನ್ನು ಸಹ ತೆರವುಗೊಳಿಸಿರುತ್ತೇವೆ. ಪೊಟೊ ತೆಗೆದ ವಿಚಾರವನ್ನು ನಿಪಿ 1 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ದೂರು ಕೊಡುವ ಸಮಯದಲ್ಲಿ ಪೊಟೊಗಳನ್ನು ಚಾಸಾ 1 ರವರು ತನಿಖಾಧಿಕಾರಿಗೆ ಕೊಟ್ಟಿಲ್ಲ. ನಿಪಿ 2 ರಿಂದ 7 ಪೊಟೊಗಳ ಮೇಲೆ ದಿನಾಂಕ ಮತ್ತು ವೇಳೆ ನಮೂದು ಇಲ್ಲ ಎಂದರೆ ಸರಿ. ನಿಪಿ 2 ರಿಂದ 7 ಪೊಟೊಗಳಲ್ಲಿ ಬಸನ್ನು ತಡೆದಿರುವ ಪೊಟೊಗಳು ಇಲ್ಲ ಎಂದರೆ ಸರಿ. ಓ ಪಾರ್ಮ ಜಂಕ್ಷನ್‌ಗೆ ನಾಲ್ಕು ರಸ್ತೆಗಳು ಸೇರುತ್ತವೆ ಎಂದರೆ ಸರಿ. ಒಂದು ರಸ್ತೆ ವೈಟಪೀಲ್ಡಗೆ, ಒಂದು ರಸ್ತೆ ಕಾಡುಗೋಡಿಗೆ, ಒಂದು ರಸ್ತೆ ಚನ್ನಸಂದ್ರಕ್ಕೆ ಮತ್ತು ಇನ್ನೊಂದು ರಸ್ತೆ ಬೆಂಗಳೂರಿಗೆ ಹೋಗುತ್ತದೆ ಎಂದರೆ ಸರಿ. ನನ್ನ ದೂರಿನಲ್ಲಿ ನಿರ್ದಿಷ್ಟವಾಗಿ ಯಾವ ರಸ್ತೆಯಲ್ಲಿ ಬಸನ್ನು ತಡೆ ಹಿಡಿದಿದ್ದರು ಎಂಬುದನ್ನು ನಮೂದು ಮಾಡಿಲ್ಲ ಎಂದರೆ ಸರಿ. ನಾನು ಘಟನಾ ಸ್ಥಳಕ್ಕೆ ಹೋದಾಗ  15 ರಿಂದ 20 ಜನ ಇದ್ದರು. ಬಸನ್ನು 15 ರಿಂದ 20 ಜನ ತಡೆ ಹಿಡಿದಿದ್ದರು.

This is a True Copy of the Court Records Online. Authenticated @ districts.ecourtsindia.com/cnr/KABR040069362018/truecopy/order-6.pdf

ಆರೋಪಿಗಳು ಬಸನ್ನು ತಡೆ ಹಿಡಿದಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ 2 ರವರ ನಿರ್ದೇಶನದ ಮೇರೆಗೆ ಚಾಸಾ 1 ರವರು ಸುಳ್ಳು ದೂರನ್ನು ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗಳು ಮತ್ತು ಚಾಸಾ 2 ರವರು ಬೇರೆ ಬೇರೆ ಪಕ್ಷದವರಾಗಿರುತ್ತಾರೆ ಎಂದರೆ ಸರಿ. ನಾನು ಮೇಲಾಧಿಕಾರಿ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಿಸಲಾಯಿತು) ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಎ.ಸಿ.ಜೆ.ಎಂ.,ಬೆಂಗಳೂರು**

This is a True Copy of the Court Records Online. Authenticated @ districts.ecourtsindia.com/cnr/KABR040069362018/truecopy/order-6.pdf